<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.</u>

**ಸಿ.ಸಿ. ಸಂಖ್ಯೆ 144/18**

**ಸಾಕ್ಷಿಯನ್ನು ದಿಃ 07.03.2023 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಪ್ರಭಾಕರ್ . ಆರ್ | ಸಿ.ಡಬ್ಲ್ಯೂಃ 9 | ಪಿ.ಡಬ್ಲ್ಯೂಃ 3 |
| ತಂದೆಯ ಹೆಸರು | ರಾಮನಾಯಕ | | |
| ವಯಸ್ಸು | 44 ವರ್ಷ | | |
| ಕೆಲಸ | ಮುಖ್ಯ ಪೇದೆ -287<br>ಹುಣಸೂರು ಪೊಲೀಸ್ ಠಾಣೆ | | |
| ವಾಸಸ್ಥಳ | ಹುಣಸೂರು | | |

<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ನಾನು ಜುಲೈ 2012 ರಿಂದ ಫೆಬ್ರವರಿ-2017 ರ ವರೆಗೆ ನಾನು ಹುಣಸೂರು ಪಟ್ಟಣ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28.02.2013 ರಂದು ಬೆಳಿಗ್ಗೆ 7 ಗಂಟೆ ಸಮಯ ನಾನು ಠಾಣೆಯಲ್ಲಿ ಇದ್ದಾಗ ಚಾಸಾ-16 ರವರು ಹುಣಸೂರು ಪಟ್ಟಣ ಠಾಣೆಯಟು ಮೊ.ಸಂ.40/2013 ರ ಆರೋಪಿ ಪತ್ತೆ ಬಗ್ಗೆ ನನ್ನನ್ನು ಮತ್ತು ಸಿಬ್ಬಂದಿಗಳಾದ ಚಾಸಾ-12,8,10,14 ರವರನ್ನು ಕರೆದುಕೊಂಡು ಮೈಸೂರಿನಲ್ಲಿ ಗಸ್ತು ಮಾಡಿ ನಂತರ ಮಂಡ್ಯಕ್ಕೆ ಹೋಗಿ ಗುಸ್ತು ಮಾಡುತ್ತಿದ್ದಾಗ ಬಾತ್ಮಿದಾರರ ಮಾಹಿತಿ ಮೇರೆಗೆ ಆರೋಪಿಯನ್ನು ಮಂಡ್ಯದ ಸಂಜಯ ಸರ್ಕಲ್ ಬಳಿ ಇರುವುದಾಗಿ ಮಾಹಿತಿ ಬಂದ ಮೇರೆಗೆ 10 ಗಂಟೆಗೆ ಸಂಜಯ ಸರ್ಕಲ್ಗೆ ಹೋಗಿ ಆರೋಪಿಯನ್ನು ವಶಕ್ಕೆ ಪಡೆದು ಚಾಸಾ-16 ರವರು ಆರೋಪಿ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಆರೋಪಿಯನ್ನು ವಿಚಾರಣೆ ಮಾಡಿರುತ್ತಾರೆ.

ಆರೋಪಿ ದಿಃ 25.02.2013 ರಂದು ತನ್ನ ಮೊಬೈಲ್ ನಿಂದ ಫೇಸ್-ಬುಕ್ ನಲ್ಲಿ ಸ್ನೇಹಿತರು ಕಳುಹಿಸಿರುವ ಹಲವಾರು ಚಿತ್ರಗಳಲ್ಲಿ ಕೆಲವನ್ನು ಆಯ್ಕೆ ಮಾಡಿ ಅದರಲ್ಲಿ ಮುಸ್ಲಿಂ ಜನಾಂಗದವರು ನಮಾಜ್ ಮಾಡುವಾಗ ಹಂದಿ ಹಿಂದೆ ಹತ್ತಿರುವ ಚಿತ್ರ ಮತ್ತು ಹಂದಿ ಮುಖಕ್ಕೆ ಚಿತ್ರಕ್ಕೆ ಮನುಷ್ಯನ ಮುಖ ಹಾಕಿದ ಚಿತ್ರ ಮತ್ತು ಒವೇಸಿ ಅವರ ಚಿತ್ರಗಳು ಮುಂತಾದವನ್ನು ತನ್ನ ಫೇಸ್ ಬುಕ್ ನಿಂದ ಸ್ನೇಹಿತರಿಗೆ ಸದರಿ ಚಿತ್ರಗಳನ್ನು ಫೇಸ್ ಬುಕ್ ಐ ಡಿ ಯಾದ sendilsandi82@gmail.com ಮುಖಾಂತರ ಸ್ನೇಹಿತರಿಗೆ ಚಿತ್ರಗಳನ್ನು ಕಳುಹಿಸಿರುವುದಾಗಿ ಆರೋಪಿ ಒಪ್ಪಿಕೊಂಡಿರುತ್ತಾರೆ. ನಂತರ ಆರೋಪಿಯನ್ನು

ಠಾಣೆಗೆ ಕರೆತಂದು ಚಾಸಾ–16 ರವರು ಕ್ರಮಕೈಗೊಂಡಿರುತ್ತಾರೆ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಲ್ ಕೆ ಜಿ ವಕೀಲರಿಂದಃ**

ಆರೋಪಿ ಪತ್ತೆಗೆ ನನ್ನನ್ನು ನೇಮಿಸಿದ ಬಗ್ಗೆ ಸಂಬಂಧಪಟ್ಟಂತೆ ನೋಟೀಸ್ ಅಥವಾ ಬರವಣಿಗೆ ಮೂಲಕ ನೀಡಿಲ್ಲ. ಆ ದಿನ ನಾವು ಆರೋಪಿ ಪತ್ತೆಗೆ ಹೋಗುತ್ತಿದ್ದೇವೆ ಎಂದು ಠಾಣೆಯಲ್ಲಿ ನಮೂದು ಮಾಡಿಲ್ಲ ಅದು ಚಾಸಾ–16 ರವರಿಗೆ ಗೊತ್ತು. ಚಾಸಾ–16 ರವರು ನಮ್ಮನ್ನು ಕರೆದುಕೊಂಡು ಹೋದ ಬಗ್ಗೆ ಡೈರಿಯಲ್ಲಿ ನಮೂದು ಮಾಡಿರುತ್ತಾರೆ. ನಮ್ಮ ಠಾಣಾ ಸರಹದ್ದು ಬಿಟ್ಟು ಆರೋಪಿ ಪತ್ತೆಗೆ ಹೋಗುತ್ತಿದ್ದೇವೆ ಎಂದು ಬರೆದು ಸಹಿ ಮಾಡಿ ಹೋಗಿರುವುದಿಲ್ಲ. ನಾವು ಆರೋಪಿ ಪತ್ತೆ ಕಾರ್ಯವನ್ನು ಮೈಸೂರು ಬಸ್ ಸ್ಟಾಂಡ್ ಮತ್ತು ಲಷ್ಕರ್ ಸರ್ಕಲ್ ಬಳಿ ಗಸ್ತು ಮಾಡಿ ನಂತರ ಮಂಡ್ಯ ಕಡೆ ಹೋಗಿರುತ್ತೇವೆ. ಸದರಿ ಜಾಗಗಳಲ್ಲಿ ನಾವು ಅನುಮಾನದ ಮೇರೆಗೆ ಹೋಗಿ ಗಸ್ತು ಮಾಡಿರುತ್ತೇವೆ. ಆರೋಪಿ ಮಂಡ್ಯದಲ್ಲಿ ಇದ್ದಾನೆ ಎಂದು ನಮಗೆ ಬಾತ್ಮೀದಾರರಿಂದ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿ ಚಾಸಾ–16 ರವರಿಗೆ ಬಂದಿರುತ್ತದೆ.

ಪ್ರಕರಣ ದಾಖಲಾಗುವ ಮೊದಲು ಆರೋಪಿ ಸೆಂದಿಲ್ ಕುಮಾರ್ ನನಗೆ ಪರಿಚಯ ಎಂದರೆ ಸರಿಯಲ್ಲ. ಅದಕ್ಕೂ ಮೊದಲು ನಾನು ಆರೋಪಿಯನ್ನು ಭಾವಚಿತ್ರದಲ್ಲಿ ನೋಡಿದ್ದೆ ಆರೋಪಿ ಫೋಟೋ ಫೇಸ್ ಬುಕ್ ನಲ್ಲಿ ಇದ್ದದನ್ನು ನಮಗೆಲ್ಲಾ ಚಾಸಾ–16 ರವರು ನಮಗೆ ತೋರಿಸಿದ್ದರು. ನಾವು ಗಸ್ತು ಕಾರ್ಯಕ್ಕೆ ಹುಣಸೂರು ಬಿಟ್ಟು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಇದೇ ಮೊದಲ ಬಾರಿ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮಂಡ್ಯದ ಸಂಜಯ ಸರ್ಕಲ್ ನಲ್ಲಿ 5 ರಸ್ತೆಗಳು ಬೇರ್ಪಡುತ್ತವೆ ಎಂದರೆ 4 ರಸ್ತೆಗಳು ಬೇರ್ಪಡುತ್ತವೆ ಎಂದು ಸಾಕ್ಷಿ ನುಡಿಯುತ್ತಾರೆ. ಅಲ್ಲಿ 5 ರಸ್ತೆಗಳಿಂದ್ದು 4 ರಸ್ತೆಗಳು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು ಆರೋಪಿಯನ್ನು ಸಂಜಯ ಸರ್ಕಲ್ ನಲ್ಲಿ ದಸ್ತಗಿರಿ ಮಾಡಿದ್ದು ಯಾವ ಭಾಗದಲ್ಲಿ ಹೇಳಲು ಆಗುವುದಿಲ್ಲ. ಸದರಿ ಸರ್ಕಲ್ ನ ಯಾವ ದಿಕ್ಕಿಗೆ ಹೋಗುವ ರಸ್ತೆಯಲ್ಲಿ ನಾವು ಆರೋಪಿಯನ್ನು ಸಂಜಯ ಸರ್ಕಲ್ ನಲ್ಲಿ ದಸ್ತಗಿರಿ ಮಾಡಿರುತ್ತೇವೆ ಹೇಳಲು ಆಗುವುದಿಲ್ಲ. ನಾವು ಮಂಡ್ಯಕ್ಕೆ ಹೋಗಿಲ್ಲ ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿಯನ್ನು ದಸ್ತಗಿರಿ ಮಾಡಿರುತ್ತೇವೆ ಎಂದು ಹೇಳಿದ ಜಾಗದ ಮಹಜರ್ ಮಾಡಿಲ್ಲ. ಸದರಿ ಜಾಗದಲ್ಲಿ ಮಹಜರ್ ಮಾಡಲು ತೊಂದರೆ ಇತ್ತಾ

ಎಂಬ ಪ್ರಶ್ನೆಗೆ ಅದು ಚಾಸಾ–16 ರವರಿಗೆ ಗೊತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿಯನ್ನು ಸಂಜಯ ಸರ್ಕಲ್ ನಲ್ಲಿ ದಸ್ತಗಿರಿ ಮಾಡಿರುತ್ತೇವೆ ಎಂದು ಚಾರ್ಜ್ ಶೀಟ್ ನಲ್ಲಿ ಇರುವ ಹೇಳಿಕೆಯನ್ನು ಹೊರತುಪಡಿಸಿ ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ಮಂಡ್ಯ ಸರ್ಕಲ್ ನಲ್ಲಿ ದಸ್ತಗಿರಿ ಮಾಡಿಲ್ಲ ಆತ ಮನೆಯಲ್ಲಿ ಇದ್ದಾಗ ದಸ್ತಗಿರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಸದರಿ ಫೋಟೋಗಳನ್ನು ನಾನು ಡೌನ್ ಲೋಡ್ ಮಾಡಿಲ್ಲ. ಡೌನ್ ಲೋಡ್ ಮಾಡಿರುವ ಬಗ್ಗೆ ಕೂಡ ನನಗೆ ಗೊತ್ತಿಲ್ಲ. ಆರೋಪಿಯ ಫೇಸ್ ಬುಕ್ ಖಾತೆಯಿಂದ ಯಾವುದೇ ಅಹಿತಕರ ಘಟನೆ ನಡೆಯುವಂತಹ ಫೋಟೋಗಳನ್ನು ಕಳುಹಿಸಲಾಗಿಲ್ಲ ಎಂದರೆ ಸರಿಯಲ್ಲ. ಆ ಸಮಯ ಮುನಿಸಿಪಲ್ ಕಮೀಷನರ್ ಚುನಾವಣೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ಸಮಯ ಆರೋಪಿಯು ತಾನು ವಾಸಿಸುವ ಏರಿಯಾದಲ್ಲಿ ಕೌನ್ಸಿಲ್ ಚುನಾವಣೆಗೆ ಸ್ಪರ್ಧಿಸುವ ಆಕಾಂಕ್ಷಿಯಾಗಿದ್ದ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಚುನಾವಣೆಗೆ ನಿಲ್ಲಬಾರದು ಎಂದು ಆರೋಪಿಯ ವಿರುದ್ಧವಾಗಿ ನಿಲ್ಲುವಂತಹ ಆಕಾಂಕ್ಷಿ ಅಭ್ಯರ್ಥಿಗೆ ಸಹಾಯ ಮಾಡಲು ನಾನು ಮತ್ತು ನನ್ನ ಸಿಬ್ಬಂದಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿಯವರ ಚಿತಾವಣೆ ಮೇರೆಗೆ ಯಾವುದೇ ಪ್ರಕರಣ ನಡೆಯದೆ ಇದ್ದರು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.